AUGUST 27, 2025

**AKASHAVANI - DHARWAD**

**PRADESH SAMACHARA (KANNADA) 12 PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಕೇಂದ್ರ ಸರ್ಕಾರದ,** ಉನ್ನತ ಶಿಕ್ಷಣ ಇಲಾಖೆಯು, ಕೊಡಮಾಡುವ 2025 ನೇ ಸಾಲಿನ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿಗೆ ಕಲಬುರಗಿ ಶರಣಬಸವ ವಿಶ್ವವಿದ್ಯಾಲಯದ ಗಣಿತ ಪ್ರಾಚಾರ್ಯರಾದ ಡಾಕ್ಟರ ಶ್ರೀದೇವಿ ಕಲ್ಯಾಣ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು 50 ಸಾವಿರ ರೂಪಾಯಿ ನಗದು ಹಾಗೂ ಬೆಳ್ಳಿ ಪದಕ ಹೊಂದಿದೆ. ದೇಶದ ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ಪಾಲಿಟೆಕ್ನಿಕ್ ಗಳಿಂದ ಒಟ್ಟು 21 ಜನ ಶಿಕ್ಷಕರು ಈ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಕರ್ನಾಟಕ ರಾಜ್ಯದಿಂದ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿಗೆ ಭಾಜನರಾದ, ಮೂವರು ಶಿಕ್ಷಕರಲ್ಲಿ ಓರ್ವರಾದ ಶ್ರೀದೇವಿ ಕಲ್ಯಾಣ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ಇಂದು ನಾಡಿನಾದ್ಯಂತ ಸಂಭ್ರಮ ಹಾಗೂ ಸಡಗರದೊಂದಿಗೆ** ಗಣೇಶ ಚತುರ್ಥಿ ಹಬ್ಬವನ್ನು ಆಚರಿಸಲಾಗುತ್ತಿದೆ. ಭಾದ್ರಪದ ಮಾಸದ ಶುಕ್ಲಪಕ್ಷದ ಚೌತಿಯಂದು, ನಾಡಿನ ಜನತೆಗೆ ಗಣ್ಯರು ಶುಭಾಶಯಗಳನ್ನು ತಿಳಿಸಿದ್ದಾರೆ. ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವರಾದ ಪ್ರಲ್ಹಾದ್ ಜೋಶಿ, ತಮ್ಮ ಎಕ್ಸ್ ಖಾತೆ ಮೂಲಕ ಶ್ರೀ ಗಣೇಶ ಚತುರ್ಥಿಯ ಶುಭಾಶಯಗಳನ್ನು ತಿಳಿಸಿದ್ದು, ಸಿದ್ಧಿ ವಿನಾಯಕನು ವಿಘ್ನ ನಿವಾರಣೆಯೊಂದಿಗೆ ಎಲ್ಲರಿಗೂ ಒಳಿತು ಮಾಡಲಿ ಎಂದು ಹಾರೈಸಿದ್ದಾರೆ.

<><><>

**ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, 'ಇಕೋ ಭಕ್ತಿ** ಸಂಭ್ರಮ' ಎಂಬ ವಿಶಿಷ್ಟ ಅಭಿಯಾನ ಆರಂಭಿಸಿದೆ. ಮಣ್ಣಿನಿಂದ ತಯಾರಿಸಿದ ಗಣೇಶ ವಿಗ್ರಹ ಪ್ರತಿಷ್ಠಾಪಿಸಿ, ಮರುಬಳಕೆ ಮಾಡಬಹುದಾದ ವಸ್ತುಗಳಿಂದ ಅಲಂಕರಿಸಿ, ಮನೆ ಆವರಣದಲ್ಲಿಯೇ ಪರಿಸರ ಸ್ನೇಹಿಯಾಗಿ ಗಣೇಶ ವಿಗ್ರಹ ವಿಸರ್ಜಿಸಿ, ಗಿಡಗಳಿಗೆ ಮಣ್ಣು ಬಳಸಿದಲ್ಲಿ, ಡಿಜಿಟಲ್ ಪ್ರಮಾಣಪತ್ರ ಹಾಗೂ ಆಯ್ಕೆಯಾದ 10 ಜನರಿಗೆ ಬಹುಮಾನ ನೀಡಲಿದೆ. www.ecobhaktihdmc.com ನಲ್ಲಿ, ಚಿತ್ರಗಳ ಸಮೇತ ಹೆಸರು ನೋಂದಾಯಿಸುವಂತೆ ಕೋರಿದೆ.

<><><>

**ಬೆಂಗಳೂರು ಗ್ರಾಮಾಂತರ ಜಿಲ್ಲೆಯ** ಗಣೇಶನ ದೇವಾಲಯಗಳಲ್ಲಿ ವಿಶೇಷ ಅಲಂಕಾರ, ಪೂಜಾ ಕಾರ್ಯಕ್ರಮಗಳು ಜರುಗುತ್ತಿವೆ, ದೊಡ್ಡಬಳ್ಳಾಪುರದಲ್ಲಿ ನೇಕಾರ ಸಮುದಾಯ, ಸಗಣಿಯಲ್ಲಿ ಪಿಳ್ಳೆರಾಯನನ್ನು ಪ್ರತಿಷ್ಠಾಪಿಸಿ, ಮಗ್ಗಗಳಿಗೆ ಪೂಜೆ ಸಲ್ಲಿಸುವ ಆಚರಣೆ ವಿಶೇಷವಾಗಿದೆ.

<><><>

**ಮಂಡ್ಯ ಜಿಲ್ಲೆಯ, ಮದ್ದೂರು,** ಕೆ.ಆರ್.ಪೇಟೆ ಹಾಗೂ ನಾಗಮಂಗಲ ತಾಲೂಕು ವ್ಯಾಪ್ತಿಯ, ಸಾವಿರದ 428 ಗ್ರಾಮಗಳಲ್ಲಿ, ತೆಂಗಿನ ಕಪ್ಪು ತಲೆ ಹುಳು ಹಾಗೂ ಬಿಳಿ ನೊಣ ಬಾಧಿತ ಪ್ರದೇಶಗಳಲ್ಲಿ, ತೋಟಗಾರಿಕೆ ಇಲಾಖೆ ವೈಜ್ಞಾನಿಕ ಸಮೀಕ್ಷೆ ಕೈಗೊಳ್ಳಲಿದೆ. ಜಿಲ್ಲಾಧಿಕಾರಿ ಕುಮಾರ, ಮಾಹಿತಿ ನೀಡಿ, ತೆಂಗು ಮಂಡ್ಯ ಜಿಲ್ಲೆಯ ಪ್ರಮುಖ ಬೆಳೆಯಾಗಿದೆ. ಒಟ್ಟು 74 ಸಾವಿರದ 731 ಹೆಕ್ಟರ್ ಪ್ರದೇಶದಲ್ಲಿ, ತೆಂಗು ಬೆಳೆಯಲಾಗುತ್ತಿದೆ. 200 ಜನ ಸಮೀಕ್ಷಕರು ತೆಂಗು ಬೆಳೆಗಾರರಿಗೆ ರೋಗ ಬಾಧೆಯ ಪರಿಹಾರ ಕ್ರಮ ತಿಳಿಸಲಿದ್ದಾರೆ ಎಂದರು.

<><><>

**ಗದಗ ಜಿಲ್ಲೆ, ಮುಂಡರಗಿ ತಾಲೂಕಿನ ಕಪ್ಪತ್ತಗುಡ್ಡದಲ್ಲಿ,** ಕಾಡಿನ ಸಸ್ಯಗಳ ಬೀಜಗಳನ್ನು ರಕ್ಷೆಯಂತೆ, ಗಿಡಗಳಿಗೆ ಪ್ರವಾಸಿಗರು ಕಟ್ಟಿ, ಪ್ರಕೃತಿಯೊಂದಿಗಿನ ಮಾನವ ಬಂಧುತ್ವವನ್ನು ಸುದೃಢಗೊಳಿಸುವ ವಿನೂತನ ಪ್ರಯತ್ನಕ್ಕೆ, ಅರಣ್ಯ ಇಲಾಖೆ ಚಾಲನೆ ನೀಡಿದೆ. ಮುಂಡರಗಿ ವಲಯ ಅರಣ್ಯಾಧಿಕಾರಿ ಮಂಜುನಾಥ ಮೇಗಳಮನಿ ಸಾರಥ್ಯದಲ್ಲಿ, 'ವೃಕ್ಷೋ ರಕ್ಷತಿ ರಕ್ಷಿತಃ' ಧ್ಯೇಯದೊಂದಿಗೆ, ರಕ್ಷೆಗಳು ಒಣಗಿ ಭೂಮಿಗೆ ಬಿದ್ದಾಗ ಬೀಜಗಳಿಂದ ಜೀವ ಸ್ಫುರಿಸಿ, ಹೊಸ ಸಸಿ ಚಿಗುರಲು ಸಾಧ್ಯವಾಗಲಿದೆ.

<><><>

**ಉಪ ಲೋಕಾಯುಕ್ತ, ನ್ಯಾಯಮೂರ್ತಿ, ಬಿ.ವೀರಪ್ಪ,** ನಾಳೆಯಿಂದ, ಮೂರು ದಿನಗಳ ಕಾಲ ರಾಯಚೂರಿಗೆ ಭೇಟಿ ನೀಡಿ, ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು, ರಾಯಚೂರು ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸತೀಶ ಚಿಟಗುಬ್ಬಿ, ತಿಳಿಸಿದ್ದಾರೆ. ಲೋಕಾಯುಕ್ತರ ಭೇಟಿ, ಅಹವಾಲು ಆಲಿಕೆ ಹಾಗೂ ದೂರುಗಳ ವಿಚಾರಣೆ ಹಿನ್ನೆಲೆ, ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ, ರಜತ ಮಹೋತ್ಸವ ಸಭಾಂಗಣದಲ್ಲಿ, ಪೂರ್ವಭಾವಿ ಸಭೆ ನಡೆಯಿತು.

<><><>

**ರಾಜ್ಯದ ವಿವಿಧೆಡೆ,** ಮಳೆ ಪುನಃಶ್ಚೇತನಗೊಂಡಿದೆ. ಆಗಸ್ಟ್ 30ರ ವರೆಗೆ, ರಾಜ್ಯದ ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಲ್ಲಿ, ಭಾರೀ ಮಳೆಯಾಗುವ ನಿರೀಕ್ಷೆ ಇದೆ. ಒಳನಾಡು ಜಿಲ್ಲೆಗಳಲ್ಲಿ, ಆಗಸ್ಟ್ 28ರ ವರೆಗೆ, ಗುಡುಗು, ಮಿಂಚು ಹಾಗೂ ಜೋರಾದ ಗಾಳಿಯೊಂದಿಗೆ, ಚದುರಿದಂತೆ ಸಾಧಾರಣ ಮಳೆ ಹಾಗೂ ಅಲ್ಲಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮಾಹಿತಿ ನೀಡಿದೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>